ದಿ.30-07-2024 ರಂದು ಆರೊಪಿಪರ ವಕೀಲರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಯ ಮುಂದುವರೆದ ಪಾಟೀಸಾಲು ಮಾಡಲು ನ್ಯಾಯಾಲಯವು ಆರೋಪಿಪರ ವಕೀಲರಿಗೆ ಅನುಮತಿ ನೀಡಲಾಯಿತು.

ದಿ.07-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀಸವಾಲುಃ-</u> ಆರೊಪಿತರ ಪರ ಶ್ರೀ ಪಿ.ಬಿ ವಕೀಲರಿಂದ.

ಆಟೋವನ್ನು ಯಾರು , ಎಲ್ಲಿಂದ ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಆಟೋದ ಮಾಲೀಕರು , ಚಾಲಕರು ಯಾರು ಎಂದು ಗೊತ್ತಿಲ್ಲ , ಕಾರಣ ನನ್ನ ಗಂಡನ ಜೀವ ಉಳಿಸುವುದು ಅವಶ್ಯವಿತ್ತು. ನನ್ನ ಗಂಡನಿಗೆ ಸ್ವಂತ ಬೈಕ್ ಇರಲಿಲ್ಲ. ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿ ನನ್ನ ಗಂಡನ ಮುಖವನ್ನುನೀರಿನಲ್ಲಿ ತೊಳೆದು ಆಸ್ಪತ್ರೆಗೆ ಹೋದೆವು. ನಾನು ಹಾಕಿಕೊಂಡಿದ್ದ ವೇಲು ರಕ್ತಮಯವಾಗಿತ್ತು. ಆಸ್ಪತ್ರೆಗೆ ನಾವು ಮೂವರು ಒಳಗಡೆ ಹೋದೆವು. ಗಲಾಟೆಯಾಗಿದೆ ಅಂತಾ ಹೇಳುವ ಸಮಯದಲ್ಲಿ ನನ್ನ ಮಾವ ಗಲಾಟೆ ಬಿಡಿಸಲು ಪ್ರಯತ್ನಪಟ್ಟರು. ಗಲಾಟೆ ಬಿಡಿಸಲು ಪ್ರಯತ್ನಪಟ್ಟಿಲ್ಲದಿದ್ದರೂ ಸಹ ಬಿಡಿಸಲು ಪ್ರಯತ್ನಪಟ್ಟರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಗಂಡನನ್ನು ನಾವು ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿಯ ವೈದ್ಯರು ನನ್ನ ಗಂಡನಿಗೆ ಚಿಕಿತ್ಸೆ ನೀಡಿಲ್ಲ. ಅಸ್ಪತ್ರೆಯಲ್ಲಿ ವೈದ್ಯರು ಇದ್ದರು. ಆ ಆಸ್ಪತ್ರೆಯಿಂದ ದಾವಣಗೆರೆಗೆ ನನ್ನ ಗಂಡನನ್ನು ಕರೆದುಕೊಂಡು ಬಂದಾಗ ನನ್ನ ಬಟ್ಟೆ ಮತ್ತು ನನ್ನ ಮಾವನ ಬಟ್ಟೆ ರಕ್ತವಾಗಿತ್ತು. ಆಸ್ಪತ್ರೆಗೆ ಹೋದಾಗ ನನ್ನ ಗಂಡನನ್ನು ಸ್ಟಚರ್ ನಲ್ಲಿ ಕರೆದುಕೊಂಡು ಹೋಗಿದ್ದರು ಬೆಡ್ ಮೇಲೆ ಮಲಗಿಸಿರಲಿಲ್ಲ. ನನ್ನ ಮಾವ ಸಹ ಚಿಗಟೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಅವರಿಗೆ ಎಷ್ಟು ತಾಸು ಚಿಕಿತ್ಸೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶವಗಾರಕ್ಕೆ ನನ್ನ ಮಾವ ಫಕ್ಕಿರಪ್ಪ ಬಂದಿರಲಿಲ್ಲ. ಕಾರಣ ಅವರು ಚಿಕಿತ್ಸೆಗೆ ಹೋಗಿದ್ದರು. ನನ್ನ ಗಂಡ ಮರಣಹೊಂದಿದ ವಿಷಯ ಗೊತ್ತಾದ ನಂತರ ರಾತ್ರಿ 12-30 ಗಂಟೆಗೆ ಪರೀಕ್ಷೆಗಾಗಿ ಶವಗಾರಕ್ಕೆ ತೆಗೆದುಕೊಂಡು ಹೋದರು. ನನ್ನ ಮಾವ ಫಕ್ಕಿರಪ್ಪ ಇವರು ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನನ್ನ ಗಂಡನ ಶವವನ್ನು ಶವಗಾರಕ್ಕೆ ತೆಗೆದುಕೊಂಡು ಹೋದಾಗ ನಾನು ನನ್ನ ಮಾವನನ್ನು ಮಾತನಾಡಿಸಿಕೊಂಡು

ಬಂದಿಲ್ಲ.

ನನ್ನ ವೇಲ್ ರಕ್ತವಾಗಿತ್ತು. ಅದನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಪೊಲೀಸರು ಸಹಿತ ರಕ್ತವಾದ ವೇಲನ್ನು ಹಾಜರುಪಡಿಸು ಅಂತಾ ನನ್ನನ್ನು ಕೇಳಿಲ್ಲ.

ನನ್ನ ಮಾವ ಪ್ರಸಾದ್ ರವರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೋ ಅಥವಾ ಎಲ್ಲಿ ವಾಸವಾಗಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ದಾವಣಗೆರೆಗೆ ಬರುವ ವಿಷಯವನ್ನು ನನ್ನ ಮಾವ ಫಕ್ಕಿರಪ್ಪ ಮತ್ತು ಅವರ ಪತ್ನಿಗೆ ಹೇಳಿಲ್ಲ. ನನ್ನ ಗಂಡ ಇವರು ಸಹಿತ ಫೋನ್ ಮಾಡಿ ಬಂದಿದ್ದರೋ ಇಲ್ಲವೋ ಗೊತ್ತಿಲ್ಲ. ದಾವಣಗೆರೆಗೆ ಬಂದ ನಂತರ ನಾನು ನನ್ನ ಮಾವ ಫಕ್ಕಿರಪ್ಪನಿಗೆ ಫೋನ್ ಮಾಡಿ ತಿಳಿಸಿಲ್ಲ. ನನ್ನ ತಮ್ಮನಿಗೆ ಹೆಣ್ಣು ನೋಡುಲು ಆ ಮನೆಗೆಹೋದಾಗ ಸಮಯ 4–30 ಗಂಟೆ, ಅಲ್ಲಿಂದ ಆ ಕಾರ್ಯಕ್ರಮ ಮುಗಿಸಿ ನನ್ನ ತವರು ಮನೆಗೆ ಬಂದಾಗ ಸಾಯಂಕಾಲ 5–30 ರಿಂದ 6–00 ಗಂಟೆಗೆ ಆಗಿತ್ತು.

ದಾವಣಗೆರೆಯಿಂದ ನಾನು, ನನ್ನ ಗಂಡ ಮತ್ತು ಮಕ್ಕಳು ಬೈಕಿನಲ್ಲಿ ಹರಿಹರಕ್ಕೆ ಬರುತ್ತಿದ್ದಾಗ ದೊಡ್ಡಬಾತಿ ಹತ್ತಿರ ಆರೋಪಿತರು ನಮ್ಮ ಜೊತೆ ಗಲಾಟೆ ಮಾಡಿಲ್ಲ , ಆದರೆ ಬೈಕ್ ಓವರ್ ಟೇಕ್ ಮಾಡಿ ಗುರಾಯಿಸಿಕೊಂಡು ಹೋದರು ಎಂದು ಉತ್ತರಿಸಿರುತ್ತಾರೆ.

ನನ್ನ ಗಂಡ ನನ್ನ ಬಗ್ಗೆ ಅನಾವಶ್ಯಕವಾಗಿ ಅನುಮಾನ ಪಡುತ್ತಿದ್ದ ಎನ್ನುವುದು ಸುಳ್ಳು. ಇದರ ಬಗ್ಗೆ ನನ್ನ ತವರು ಮನೆಯಲ್ಲಿ ಮಾತನಾಡುತ್ತಿದ್ದ ಎನ್ನುವುದು ಸುಳ್ಳು. ನನ್ನ ಗಂಡ ಆರೋಪಿತರಿಗೆ ಮತ್ತು ಸಂಬಂಧಿಕರಿಗೆ ನಮ್ಮ ಮನೆಯ ವಿಚಾರವಾಗಿ ಮಾತನಾಡಬೇಕಾಗಿದೆ ಬನ್ನಿ ಅಂತಾ ಅವರನ್ನು ಕರೆದಿದ್ದ ಎನ್ನುವುದು ಸುಳ್ಳು. ಆಗ ನನ್ನ ಮಾವ ಕುಮಾರನ ಮಾತು ಕೇಳಿಕೊಂಡು ನಮ್ಮ ಮನೆಯ ವಿಚಾರಕ್ಕೆ ನೀವು ಬರುತ್ತಿದ್ದೀರಾ ಅಂತಾ ನನ್ನ ಮಾವ ಫಕ್ಕಿರಪ್ಪ ರವರು ಆರೋಪಿತರ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾರೆ ಎನ್ನುವುದು ಸರಿಯಲ್ಲ. ಆಗ ಆರೋಪಿತರು ನಿಮ್ಮ ಮನೆಯ ವಿಚಾರವನ್ನು ನೀವೇ ಬಗೆಹರಿಸಿಕೊಳ್ಳಿ ಅಂತಾ ಹೇಳಿ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋಗಿರುತ್ತಾರೆ ಎನ್ನುವುದು ಸುಳ್ಳು. ಆಗ ಅವರು ಆಸ್ಪತ್ರೆಗೆ ಹೋದ ಮೇಲೆ ನನ್ನ ಮಾವ ಅವರ ಕಡೆಯಿಂದ ಸಹಾಯ ಪಡೆಯುತ್ತೀಯಾ ಅಂತಾ ಹೇಳಿ ನನ್ನ ಮಾವನೇ ನನ್ನ ಗಂಡನ ಮೇಲೆ ಹಲ್ಲೆ ಮಾಡಿರುತ್ತಾರೆ ಎನ್ನುವುದು ಸುಳ್ಳು. ನನ್ನ , ನನ್ನ ಮಾವ ಮತ್ತು ನನ್ನ

ಗಂಡನ ಮಧ್ಯ ಆದ ಗಲಾಟೆಗೆ ನಾವೇ ಮೂರು ಜನ ನನ್ನ ಗಂಡನಿಗೆ ಚಿಕಿತ್ಸೆ ಕೊಡಿಸಲು ಆಸ್ಪತ್ರೆಗೆ ಹೋಗಿರುತ್ತೇವೆ ಎನ್ನುವುದು ಸುಳ್ಳು. ಆಗ ನನ್ನ ಗಂಡ ಆರೋಪಿತರಿಗೆ ಇವರಿಬ್ಬರೂ ಸೇರಿ ನನ್ನನ್ನು ಕೊಂದು ಬಿಡುತ್ತಾರೆ , ನನ್ನನ್ನು ಉಳಿಸಿರೆ ಅಂತಾ ತಿಳಿಸಿರುತ್ತಾರೆ ಎನ್ನುವುದು ಸುಳ್ಳು. ಆಗ ನನ್ನ ಮಾವ ಅವರು ನಿನ್ನನ್ನು ಹೇಗೆ ಉಳಿಸಿಕೊಳ್ಳುತ್ತಾರೆ, ನೋಡಿಕೊಳ್ಳತ್ತೇನೆ ಅಂತಾ ಹೇಳಿ ತನ್ನ ಬಳಿ ಇರುವ ಚಾಕುವಿನಿಂದ ನನ್ನ ಗಂಡನಿಗೆ ಚುಚ್ಚಿ ಕೊಲೆ ಮಾಡಿರುತ್ತಾರೆ ಎನ್ನುವುದು ಸುಳ್ಳು. ಈ ವಿಷಯ ಗೊತ್ತಾಗಿದ್ದರಿಂದ ಹರಿಹರ ಆಸ್ಪತ್ರೆಯ ವೈದರು ನನ್ನ ಗಂಡನಿಗೆ ಚಿಕಿತ್ಸೆ ನೀಡದೇ ಹಾಗೆಯೇ ಕಳುಹಿಸಿರುತ್ತಾರೆ ಎನ್ನುವುದು ಸುಳ್ಳು.

ಹರಿಹರ ಆಸ್ಪತ್ರೆಗೆ ಹೋದಾಗ ಪೊಲೀಸರು ಇನ್ನು ಬಂದಿರಲಿಲ್ಲ. ನನ್ನ ಮಾವ ಫಕ್ಕಿರಪ್ಪ ಚಿಕಿತ್ಸೆ ಪಡೆದು ಮಾರನೇ ದಿನ ಸಿಜಿ ಆಸ್ಪತ್ರೆಯಲ್ಲಿ ನನ್ನನ್ನು ಭೇಟ್ಟಿಯಾದ, ಆಗ ಅವರು ಇನ್ನು ಚಿಕಿತ್ಸೆ ಪಡೆಯುತ್ತಿರಲಿಲ್ಲ ಹೊರಗಡೆ ಇದ್ದರು. ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಮಾವನನ್ನು ವಿಚಾರ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪೊಲೀಸರು ಆಸ್ಪತ್ರೆಗೆ ಬಂದಾಗ ನನ್ನ ಮಾವ ಇದ್ದಾರೆ ಅಂತಾ ಹೇಳಿರುವುದಿಲ್ಲ.

ದೂರು ಕೊಡಲು ನಾನು ಒಬ್ಬಳೇ ಹೋಗಿದ್ದೆ. ನನ್ನ ಜೊತೆ ಫಕ್ಕಿರಪ್ಪ ಬಂದಿಲ್ಲ. ನನ್ನ ಮಾವ ಆಸ್ಪತ್ರೆಯಲ್ಲಿ ತುರ್ತು ಘಟಕದಲ್ಲಿ ಚಿಕಿತ್ಸೆ ಪಡೆದಿಲ್ಲ ಎನ್ನುವುದು ಸರಿಯಲ್ಲ. ಮಹಜರ್ ಮಾಡುವ ಸಮಯಕ್ಕೆ ಫಕ್ಕಿರಪ್ಪ ನಮ್ಮ ಜೊತೆ ಇರಲಿಲ್ಲ. ಪೊಲೀಸರು ಅವರನ್ನು ಕರೆಯಲು ಪ್ರಯತ್ನಪಟ್ಟಿಲ್ಲ. ಆರೋಪಿತರಿಗೂ ಈ ಕೇಸಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ನನ್ನ ಗಂಡನ ಕೊಲೆಯನ್ನು ನನ್ನ ಮಾವನೇ ಮಾಡಿರುತ್ತಾನೆ ಎನ್ನುವುದು ಸುಳ್ಳು. ನನ್ನ ಮಾವನ ಮಾತು ಕೇಳಿ ನಾನು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು.

ದೊಡ್ಡಬಾತಿ ಹತ್ತಿರ ಆರೋಪಿತರು ನಮ್ಮನ್ನು ಗುರಾಯಿಸಿನೋಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಾತ್ರಿ 10–15 ಗಂಟೆಗೆ ಹರಿಹರದ ನಮ್ಮ ಮನೆ ಹತ್ತಿರ ಆರೋಪಿತರು ಕಲ್ಲನ್ನು ತೆಗೆದುಕೊಂಡು ನನ್ನ ಗಂಡನ ಕಾಲಿಗೆ ಎತ್ತಿಹಾಕಿರುತ್ತಾರೆ ಅಂತಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆಸ್ಪತ್ರೆಯಲ್ಲಿ ನನ್ನ ಗಂಡನಿಗೆ ಆರೋಪಿತರು ಚಾಕು ಚುಚ್ಚಿ ಗಾಯಪಡಿಸಿರುತ್ತಾರೆ ಅಂತಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಸಂಜೆ 4–30 ಗಂಟೆಗೆ ಶವವನ್ನು ಹರಿಹರದ ಮನೆಗೆ ತೆಗೆದುಕೊಂಡು ಬರಲಾಯಿತು. ಶವಗಾರದಿಂದ ನನ್ನ ಗಂಡನ ಶವವನ್ನು ನಮ್ಮ ಊರಿಗೆ ತೆಗೆದುಕೊಂಡು ಹೋಗಿ ಮಣ್ಣು ಮಾಡುವವರೆಗೆ ನಾನು ಶವದ ಬಳಿ ಇದ್ದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ – ಪೊಲೀಸರು ಒಂದುಬಾರಿ ಮಹಜರ್ ಮಾಡಲು ಹರಿಹರದ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಆ ದಿನ ದಾವಣಗೆರೆಯನ್ನು ಬಿಟ್ಟಾಗ ಮಧ್ಯಾಹ್ನ 12–30 ಗಂಟೆ. ನಂತರ ನೇರವಾಗಿ ಹರಿಹರ ಆಸ್ಪತ್ರೆಗೆ ಹೋದೆವು. ಬೈಕಿನ ಮುಖಾಂತರ ದಾವಣಗೆರೆ ಆಸ್ಪತ್ರೆಯಿಂದ ಹರಿಹರ ಆಸ್ಪತ್ರೆಗೆ ನಾನು ಮತ್ತು ನನ್ನ ಮಾವ ಸಿದ್ದೇಶ್ ಹೋದೆವು. ಮಹಜರ್ ಗೆ ಬರಲು ಪೊಲೀಸರುನೋಟೀಸು ಕೊಟ್ಟಿಲ್ಲ , ನೇರವಾಗಿ ಬಂದು ಕರೆದುಕೊಂಡು ಹೋದರು. ಹರಿಹರ ಆಸ್ಪತ್ರೆಯಲ್ಲಿದ್ದಾಗ ಮಧ್ಯಾಹ್ನ 1–00 ಗಂಟೆ. ಅಲ್ಲಿ 2–30 ಗಂಟೆ ವರೆಗೆ ಇದ್ದೆ. ದಾವಣಗೆರೆಯಿಂದ ಹರಿಹರಕ್ಕೆ ಬರುವಾಗ ನನ್ನ ಮಾವ ಫಕ್ಕಿರಪ್ಪ ಆಸ್ಪತ್ರೆಯಲ್ಲಿದ್ದನೋ ಇಲ್ಲವೋ ನನಗೆ ಗೊತ್ತಿಲ್ಲ.

ಹರಿಹರ ಆಸ್ಪತ್ರೆಯಲ್ಲಿ ಮಹಜರ್ ಗೆ ಮಾಹಿತಿ ನಾನು ಹೇಳಿದೆ ಅವರು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿದರು. ಹರಿಹರ ಆಸ್ಪತ್ರೆಯಲ್ಲಿ ಮಹಜರ್ ಮಾಡಲು ಹೋದಾಗ ವೈದ್ಯರು ಆಸ್ಪತ್ರೆಯಲ್ಲಿ ಇದ್ದರೋ ಇಲ್ಲವೋ ನೋಡಿಲ್ಲ. ವೈದ್ಯರು ಆ ಸಮಯದಲ್ಲಿ ಚೇರ್ ನಲ್ಲಿ ಕುಳಿತಿದ್ದರೋ ಇಲ್ಲವೋ ನಾನು ನೋಡಿಲ್ಲ. ಮಹಜರ್ ಆದ ನಂತರ ಪುನಃ ನಾವು ದಾವಣಗೆರೆ ಸಿಜಿ ಆಸ್ಪತ್ರೆಗೆ ಬಂದೆವು. ಸಿದ್ದೇಶ್ ಇವರು ನನ್ನನ್ನು ಮಹಜರ್ ಮಾಡಲು ಕರೆದುಕೊಂಡು ಹೋಗಿಲ್ಲ , ನನ್ನ ಸಮಕ್ಷಮ ಮಹಜರ್ ಮಾಡಿಲ್ಲ ಎನ್ನುವುದು ಸರಿಯಲ್ಲ. ಮಹಜರ್ ಗೆ ನನ್ನ ಮತ್ತು ಪೊಲೀಸರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ಸಿದ್ದೇಶ್ ಈತನು ಮಹಜರ್ ಗೆ ಸಹಿ ಮಾಡಿಲ್ಲ. ಆಸ್ಪತ್ರೆಯಲ್ಲಿ ಮಹಜರ್ ಮಾಡಿಲ್ಲ ,ಯಾವೊದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಆಸ್ಪತ್ರೆಯಲ್ಲಿ ನನ್ನ ಗಂಡನ ಚಪ್ಪಲಿ ಅಲ್ಲೇ ಬಿದಿದ್ದು ಪೊಲೀಸರು ಅವುಗಳನ್ನು ತೆಗೆದುಕೊಂಡರು. ಬಸವರಾಜ್ ಎಂಬುವವರು ಚಪ್ಪಲಿ ಸ್ಟ್ಯಾಂಡ್ ನಲ್ಲಿ ಚಪ್ಪಲಿ ಇಟ್ಟಿದ್ದರಂತೆ , ಅವುಗಳನ್ನು ತಂದು ಕೊಟ್ಟರು.

ನಿಪಿ.6 ಫೋಟೋದಲ್ಲಿ ಕಾಣುತ್ತಿರುವ ಚಪ್ಪಲಿ ಹಾಕಿದ ಬಾಕ್ಸ್ ಚಪ್ಪಲಿ ಅಂಗಡಿಯಿಂದ ತಂದ ಬಾಕ್ಸಾಗಿದೆ ಎನ್ನುವುದು ಸುಳ್ಳು. ಸದರಿ ಚಪ್ಪಲಿಗಳು ನನ್ನ ಗಂಡನವು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಂಚನಾಮೆ ಬರೆಯಲು ಇನ್ಸಪೆಕ್ಟರ್ ದೇವಾನಂದ್ ಇವರು ಮಾಹಿತಿ ಕೊಟ್ಟರು. 16 ನೇ ತಾರೀಖಿನಂದು ಪೊಲೀಸರು ಸ್ಥಳ ಪಂಚನಾಮೆಗೆ ಬಂದಾಗ ನನ್ನ ಮಾವ ಫಕ್ಕಿರಪ್ಪ ಮನೆಯಲ್ಲಿದ್ದರು. ಆ ಸಮಯದಲ್ಲಿ ಫಕ್ಕಿರಪ್ಪ ಇವರನ್ನು ಕರೆಯುವ ಪ್ರಯತ್ನ ಪಟ್ಟಿಲ್ಲ. ಹಾಗೂ ಫಕ್ಕಿರಪ್ಪನ ಬಗ್ಗೆ ಪೊಲೀಸರು ವಿಚಾರ ಮಾಡಲಿಲ್ಲ. ಫಕ್ಕಿರಪ್ಪ ಮನೆಯಲ್ಲಿರುವ ವಿಚಾರವನ್ನು ನಾನು ಪೊಲೀಸರಿಗೆ ಹೇಳಿಲ್ಲ. ನಮ್ಮ ಮನೆ ಹತ್ತಿರ ಮಾಡಿದ ಪಂಚನಾಮೆಗೆ ನನ್ನನ್ನು ಹೊರತುಪಡಿಸಿ ಮಂಜುನಾಥ ಮತ್ತು ರಾಘವೇಂದ್ರ ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆ ಬರೆಯಲು ದೇವಾನಂದ ಪೊಲೀಸರು ಮಾಹಿತಿ ಕೊಟ್ಟರು. ಪೊಲೀಸರು ಸ್ಥಳದ ಹತ್ತಿರ ಬಂದಿಲ್ಲ , ಮಹಜರ್ ಮಾಡಿಲ್ಲ ಎನ್ನುವುದು ಸರಿಯಲ್ಲ. ಮಹಜರ್ ಸಹಿಯನ್ನು ನಾನು ಠಾಣೆಯಲ್ಲಿ ಮಾಡಿರುತ್ತೇನೆ ಎನ್ನುವುದು ಸುಳ್ಳು.

ನನ್ನ ಮಾವ ನನ್ನ ಗಂಡನನ್ನು ಕೊಲೆ ಮಾಡಿದ್ದು , ನನ್ನ ಮಾವನ ಮಾತು ಕೇಳಿಕೊಂಡು ಸುಳ್ಳು ದೂರು ಕೊಟ್ಟು , ಸುಳ್ಳು ಕಟ್ಟು ಕಥೆ ಕಟ್ಟಿ ಸುಳ್ಳು ಕೇಸು ದಾಖಲು ಮಾಡಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇರೀತಿಯ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

PW-2

ದಿ.30-07-2024 ರಂದು ಆರೊಪಿಪರ ವಕೀಲರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಯ ಮುಂದುವರೆದ ಪಾಟೀಸಾಲು ಮಾಡಲು ನ್ಯಾಯಾಲಯವು ಆರೋಪಿಪರ ವಕೀಲರಿಗೆ ಅನುಮತಿ ನೀಡಲಾಯಿತು.

ದಿ.07-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋಧೀಸಲಾಯಿತು.

<u>ಪಾಟೀಸವಾಲುಃ-</u> ಆರೊಪಿತರ ಪರ ಶ್ರೀ ಪಿ.ಬಿ ವಕೀಲರಿಂದ.

ಮೃತ ಕುಮಾರ್ ನನ್ನ ತಮ್ಮ , ಆತನ ಜೀವಿತ ಅವಧಿಯಲ್ಲಿ ನನ್ನ ಮತ್ತು ಆತನ ಮೇಲೆ ಹರಿಹರ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣಗಳುನಡೆಯುತ್ತಿದ್ದವು ಎನ್ನುವುದು ನಿಜ.

ನನ್ನ ತಂದೆಗೆ ನಾವು ಒಟ್ಟು ನಾಲ್ಕು ಜನ ಮಕ್ಕಳು. ಮೂರು ಜನ ಹೆಣ್ಣುಮಕ್ಕಳು. ಒಬ್ಬಳೇ ಹೆಣ್ಣುಮಗಳು. ಎಲ್ಲರದೂ ಮದುವೆಯಾಗಿದೆ. ಗಂಡುಮಕ್ಕಳಲ್ಲಿ - ನಾನು, ಮೃತ ಕುಮಾರ್ ಮತ್ತು ಪ್ರಸಾದ್. ಹರಿಹರದ 5 ನೇ ಮೇನ್ , 4 ನೇ ಕಾಸ್, ಹಳೇ ಶಿವಪ್ಪ ಕಛೇರಿ ಎದುರರು ಪ್ರಸಾದ್ ವಾಸಮಾಡಿಕೊಂಡಿದ್ದಾನೆ. ಮದುವೆ ಪೂರ್ವದಲ್ಲಿ ಪ್ರಸಾದ್ ನಮ್ಮ ಜೊತೆ ಇದ್ದ. ಮದುವೆಯಾದ ನಂತರ ಪ್ರತ್ಯೇಕವಾಗಿ ವಾಸ ಮಾಡಿಕೊಂಡಿದ್ದಾನೆ. ಸದರಿ ಪ್ರಸಾದ್ ಈತನು ಸ್ವಂತ ಮನೆಯಲ್ಲಿ ವಾಸ ಮಾಡಿಕೊಂಡಿದ್ದಾನೆ. ಸರ್ಕಾರಿ ಜಾಗದಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದಾನೆ. ಖಾತೆಯಲ್ಲಿ ಪ್ರಸಾದನ ಹೆಸರು ಇಲ್ಲ ಎನ್ನುವುದು ಸರಿಯಲ್ಲ. ಪ್ರಸಾದ್ ಇವರು ಯಾವ ಸಾಲಿನಲ್ಲಿ ಮನೆ ಕಟ್ಟಿರುತ್ತಾನೆ ಎಂದು ನನಗೆ ಮಾಹಿತಿ ಇಲ್ಲ. ಆದರೆ ಸರ್ಕಾರಿ ಜಾಗದಲ್ಲಿ ನನ್ನ ತಮ್ಮ ಮನೆ ಕಟ್ಟಿದ್ದಾನೆ. ಸರ್ಕಾರದಿಂದ ಮಂಜೂರಾಗಿಲ್ಲ. ಕೌನ್ಸಿಲ್ ರವರು ಇದೇ ಜಾಗದಲ್ಲಿ ವಾಸಮಾಡಿಕೊಂಡಿರಿ ಎಂದು ನೀಡಿದ ಪತ್ರದ ಆಧಾರದ ಮೇಲೆ ಪ್ರಸಾದ್ ಮನೆ ಕಟ್ಟಿದ್ದಾನೆ . ಪ್ರಸಾದ್ ಈತ ಬಾಡಿಗೆ ಮನೆಯಲ್ಲಿದ್ದರೂ ಸಹ ಸ್ವಂತ ಮನೆಯಲ್ಲಿದ್ದಾನೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು.

ನಾನು ಎಗ್ ರೈಸ್ ಅಂಗಡಿಯನ್ನು ಬೆಳಿಗ್ಗೆ 11-00 ರಿಂದ ರಾತ್ರಿ 11-30 ರಿಂದ 12-00 ಗಂಟೆ ವರೆಗೆ ಜಯಶ್ರೀ ಟಾಕಿಸ್ ಎದುರು ನಡೆಸುತ್ತಿದ್ದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ - ಮಧ್ಯಾಹ್ನ 12-00 ಗಂಟೆಯಿಂದೆ ರಾತ್ರಿ 9-00 ರ ವರೆಗೆ ನಾನು ನಡೆಸುತ್ತಿದ್ದೆ

ಎಂದು ಉತ್ತರಿಸಿರುತ್ತಾರೆ. ಸದರಿ ಎಗ್ ರೈಸ್ ಅಂಗಡಿ ಎದುರು ಭಾರತ್ ಆಯಿಲ್ ಮಿಲ್ ಕಂಪೌಡ್ ಇರುತ್ತದೆ ಎನ್ನುವುದು ಸುಳ್ಳು . ಆದರೆ ಸಿದ್ದೇಶ್ವರ ಬಿಲ್ಡಿಂಗ್ ನ ಹಿಂದುಗಡೆ ಭಾರತ್ ಆಯಿಲ್ ಮಿಲ್ ಕಂಪೌಂಡ್ ಇರುತ್ತದೆ. ಸಿದೇಶ್ವರ ಬಿಲ್ಡಿಂಗ್ ಕಾಂಪ್ಲೆಕ್ಸ್ ನನ್ನ ಅಂಗಡಿ ಮುಂದೆ ಇರುತ್ತದೆ. ಭಾರತ್ ಆಯಿಲ್ ಮಿಲ್ ಏರಿಯಾ ಇದು ಸ್ಲಂ ಏರಿಯಾ ಇರುತ್ತದೆ ಎಂದೆರ ನನಗೆ ಗೊತ್ತಿಲ್ಲ.

ನನ್ನ ತಮ್ಮ ಪ್ರಸಾದನಿಗೆ ತಲೆಗೆ ಪೆಟ್ಟು ಬಿದ್ದು ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎನ್ನುವುದು ಸುಳ್ಳು. ಆದರೆ ಮಾನಸಿಕ ಕಾಯಿಲೆಗೆ ಆತ ಚಿಕಿತ್ಸೆ ಪಡೆಯುತ್ತಿದ್ದಾನೆ. ನಾನು ಆತನ ತಲೆಗೆ ಹೊಡೆದಿರುವುದರಿಂದ ತಲೆಗೆ ಪೆಟ್ಟು ಬಿದ್ದು , ಆ ಕಾರಣದಿಂದ ಆತ ಚಿಕಿತ್ಸೆ ಪಡೆಯುತ್ತಿದ್ದಾನೆ ಎನ್ನುವುದು ಸುಳ್ಳು, ಇವತ್ತು ಸಹಿತ ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎನ್ನುವುದು ಸುಳ್ಳು. ಮದುವೆ ಪೂರ್ದಲ್ಲಿ ಆತ ನಾರ್ಮಲ್ ಇದ್ದ. ಮದುವೆಯಾದ ನಂತರ ಆತ ಡಿಪ್ರೆಶನ್ ಗೆ ಹೋದ.

ನನ್ನ ಮನೆ ಹರಿಹರದ ಪ್ರಶಾಂತ್ ನಗರದ ಮುಖ್ಯ ರಸ್ತೆಯಲ್ಲಿದೆ. ಸದರಿ ರಸ್ತೆ ಔಟರ್ ರಿಂಗ್ ರೋಡಿನಲ್ಲಿ ಮುಕ್ತಾಯವಾಗುತ್ತದೆ ಎನ್ನುವುದು ಸುಳ್ಳು. ನಮ್ಮ ಮನೆಯ ಮುಂದೆ ಇರುವ ರಸ್ತೆ ಸಿಮೆಂಟ್ ರಸ್ತೆ. ಸದರಿ ರಸ್ತೆಯಿಂದ ಮುಂದೆ ಬಂದು , ಎಡಭಾಗದಲ್ಲಿ ಚಾನಲ್ ರಸ್ತೆ ಇದ್ದು , ಆ ರಸ್ತೆ ಮುಖಾಂತರ ಮುಂದೆ ಹೋದರೆ ಪಿ ಬಿ ರೋಡ್ ಸಿಗುತ್ತದೆ. ಆ ರಸ್ತೆ ಡಾಂಬರಿಕರಣವಾಗಿದೆ ಎನ್ನುವುದು ಸುಳ್ಳು. ಆದರೆ ಸಿಮೆಂಟ್ ರಸ್ತೆಯಾಗಿದೆ. ಪ್ರಶಾಂತ್ ನಗರದ ಮುಖ್ಯ ರಸ್ತೆಯಿಂದ ಚಾನಲ್ ನಿಂದ ಫ್ಯಾಕ್ಟರಿಗೆ ಹೋಗುವ ರಸ್ತೆ ಮಣ್ಣಿನಿಂದ ಕೂಡಿದ ರಸ್ತೆ ಇರುತ್ತದೆ ಎಂದರೆ ನಿಜ. ಚಾನಲ್ ನಿಂದ ದೊಡ್ಡಬಾತಿಗೆ ಹೋಗುವ ಫ್ಯಾಕ್ಟರಿ ರಸ್ತೆ ಅಕ್ಕಪಕ್ಕದಲ್ಲಿ ಹೊಲಗಳು ಇವೆ. ಸದರಿ ರಸ್ತೆಯ ಅಕ್ಕಪಕ್ಕದಲ್ಲಿ ಜಾಲಿಗಿಡಗಳು ಇವೆ. ಸದರಿ ರಸ್ತೆಯಲ್ಲಿ ವಾಹನಗಳು ಹೆಚ್ಚು ಓಡಾಡುವುದಿಲ್ಲ ಎನ್ನುವುದು ಸರಿಯಲ್ಲ. ಸಾಯಂಕಾಲ 6-00 ಗಂಟೆ ನಂತರ ಸದರಿ ರಸ್ತೆಯಲ್ಲಿ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗುವುದು , ಬರುವುದು ಮಾಡುವುದಿಲ್ಲ ಎನ್ನುವುದು ಸುಳ್ಳು. 6-00 ಸಮಯದಲ್ಲಿ ಹೆಣ್ಣುಮಕ್ಕಳು ಸದರಿ ರಸ್ತೆಯಲ್ಲಿ ಓಡಾಡುತ್ತಿಲ್ಲದಿದ್ದರೂ ಸಹ ಓಡಾಡುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎನ್ನುವುದು ಸರಿಯಲ್ಲ.

ಮೃತ ಕುಮಾರ್ ಈತನಿಗೆ ಸ್ವಂತ ಬೈಕ್ ಇರಲಿಲ್ಲ. ಮೃತ ಕುಮಾರ್ ಈತನು ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತಿದ್ದ. ಪ್ರತಿ ದಿನವೂ ಸಹ ಆತನಿಗೆ ಕೆಲಸ ಇತ್ತು. ವಾದಲ್ಲಿ

ಒಂದು ಅಥವಾ ಎರಡು ದಿನ ಮಾತ್ರ ಆತನಿಗೆ ಕೆಲಸ ಇತ್ತು ಎನ್ನುವುದು ಸುಳ್ಳು.

ಹರಿಹರದ ನ್ಯಾಯಾಲಯದಲ್ಲಿರುವ ಪ್ರಕರಣಗಳಲ್ಲಿನಾನೇ ವಕೀಲರನ್ನು ಭೇಟ್ಟಿಯಾಗುವುದು , ಆ ಪ್ರಕರಣಕ್ಕೆ ಇರುವ ಎಲ್ಲಾ ಕೆಲಸಗಳನ್ನು ನಾನೇ ಮಾಡುತ್ತಿದ್ದೆ. ಅದಕ್ಕೆ ಆಗುವ ಎಲ್ಲಾ ಖರ್ಚು , ವೆಚ್ಚಗಳನ್ನು ನಾನೇ ಭರಿಸುತ್ತಿದ್ದೆ.

ನನ್ನ ತಮ್ಮ ಬಾತಿ ಶುಗರ್ ಫ್ಯಾಕ್ಟರಿಯಿಂದ ನಮ್ಮ ಮನೆ ಹತ್ತಿರ ಬರುವ ಮೊದಲೇ ಅರೋಪಿತರು ನಮ್ಮ ಮನೆಯ ಬಳಿ ನನ್ನ ತಮ್ಮನನ್ನು ಕಾಯುತ್ತಿದ್ದರು ಎಂಬುದನ್ನು ನಾನು ಪ್ರತ್ಯೆಕ್ಷವಾಗಿ ನೋಡಿಲ್ಲ. ನನ್ನ ತಮ್ಮ ಮನೆಯಿಂದ 40 ಅಡಿ ದೂರದಲ್ಲಿ ಬಂದಗಾರ ಆರೋಪಿತರು ನನ್ನ ತಮ್ಮನನ್ನು ಅಡ್ಡಗಟ್ಟಿ ಯಾಕಲೇ ಗುರಾಯಿಸುತ್ತೀಯಾ ಅಂತಾ ಆರೋಪಿ ರಾಜು ನನ್ನ ತಮ್ಮನ ಮೈಕೈಗೆ ಮುಷ್ಟಿಮಾಡಿ ಹೊಡೆದಿದ್ದು, ಆರೋಪಿ ಮಾರುತಿ ನನ್ನ ತಮ್ಮನ ಮೇಲೆ ದೊಡ್ಡ ಕಾಂಕ್ರಿಟ್ ಕಲ್ಲು ಎತ್ತಿ ಹಾಕಿದ್ದನ್ನು ನಾನು ನೋಡಿರುತ್ತೇನೆ. ಈ ರೀತಿ ನೋಡಿಲ್ಲದಿದ್ದರೂ ಸಹ ನಾನು ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ಹರಿಹರ ನ್ಯಾಯಾಧೀಶರ ಮುಂದೆ ಕಲಂ.164ರ ಅಡಿಯಲ್ಲಿ ಹೇಳಿಕೆ ನೀಡಿದ್ದೇನೆ. ಭಾನುವಾರ ದಿನಾಂಕ.14-05-2023 ರಾತ್ರಿ 10-15 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಮಲಗಿಕೊಂಡಿದ್ದೇನು. ಆಗ ಪಕ್ಕದ ಮನೆಯವರು ಬಂದು ನಿನ್ನ ತಮ್ಮನಿಗೆ ಯಾರೋ ಹೊಡೆದಿದ್ದಾರೆ , ಬೇಗ ಬಾ ಎಂದು ಕರೆದರು , ನಾನು ಹೊರಗಡೆ ಹೋಗಿ ನೋಡಿದಾಗ ಅಲ್ಲಿ ಯಾರು ಇರಲಿಲ್ಲ ಎಂದು ನಾನು ಹೇಳಿಕೆ ಕೊಟ್ಟಿರುವುದಿಲ್ಲ. ನಾನು ನ್ಯಾಯಾಧೀಶರ ಮುಂದೆ ಕಲಂ.164ರ ಅಡಿಯಲ್ಲಿ ನೀಡಿದ ಹೇಳಿಕೆ ಸುಳ್ಳು ಇರುತ್ತದೆ.

ಘಟನೆಯಾಗಿದೆ ಅಂತಾ ಹೇಳಿದ ದಿನ ನಾನು ಎಗ್ ರೈಸ್ ಅಂಗಡಿ ನಡೆಸಿಲ್ಲ , ಆ ದಿನ ನಾನು ಮನೆಯಲ್ಲಿದ್ದೆ. ಮೃತನ ಹೆಂಡತಿ ಮತ್ತು ಮಕ್ಕಳು ದಾವಣಗೆರೆ ಎಷ್ಟು ಗಂಟೆಗೆ ಹೋಗಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ , ಅವರು ದಾವಣಗೆರೆಗೆ ಹೋಗಿದ್ದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.

PW-2

ದಿ.07-08-2024 ರಂದು ಮಧ್ಯಾಹ್ನ 3-00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ಆರೋಪಿತರ ಪರ ಶ್ರೀ ಪಿ.ಬಿ ವಕೀಲರಿಂದ.

ಆರೋಪಿ ಮಾರುತಿ ಈತನು ದೊಡ್ಡ ಕಾಂಕ್ರಿಟ್ ಕಲ್ಲನ್ನು ನನ್ನ ತಮ್ಮನ ಕಾಲಿಗೆ ಎತ್ತಿಹಾಕಿ , ಅದು ಆತನ ಹೊಟ್ಟೆ , ಕಾಲಿಗೆ ಬಿದ್ದು, ಗಾಯವಾಗಿದೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆಸ್ಪತ್ರೆಗೆ ಆಟೋಮೂಲಕ ಕರೆದುಕೂಂಡು ಹೋಗಿದ್ದೇವೆ ಎಂದು ಹೇಳಿದ್ದು , ಸದರಿ ಆಟೋದ ನಂಬರ್, ಅದರ ಚಾಲಕ ಮತ್ತು ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸರ್ಕಲ್ನಲ್ಲಿದ್ದ ಆಟೋಪಿವನ್ನು ನನ್ನ ಮಗ ಕರೆದುಕೊಂಡು ಬಂದ. ನಾನು ಗಲಾಟೆ ಬಿಡಿಸಲು ಹೋದಾಗ ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ. ನನ್ನ ತಮ್ಮನ ಮುಖವೆಲ್ಲ ಸಂಪೂರ್ಣ ರಕ್ತವಾಗಿದ್ದರಿಂದ ಆತನ ಮುಖವನ್ನು ನಾನು ನೀರು ಹಾಕಿ ತೊಳೆದೆ ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ. ಮುಖ ತೊಳೆದ ಸ್ಥಳದಲ್ಲಿ ರಕ್ತದನೀರು ಬಿದ್ದಿತ್ತು.

ಆಸ್ಪತ್ರೆಯ ಒಳಗಡೆ ನಾವು ಎಲ್ಲರೂ ಜೊತೆಗೆ ಹೋದೆವು. ನಾವು ಆಸ್ಪತ್ರೆಗೆ ಹೋದ ತಕ್ಷಣ ನರ್ಸ್ ಅಲ್ಲೇ ಇದ್ದರು ಹಾಗೂ ಆರೋಪಿತರು ಸಹ ಅಲ್ಲೇ ಇದ್ದರು. ಮೃತ ನನ್ನ ತಮ್ಮನ ಹೆಂಡತಿ ಮೇಲೆ ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಹಾಗೂ ಅವರ ಮೇಲೆ ಯಾವುದೇ ಗಾಯಗಳಾಗಿಲ್ಲ. ನನ್ನ ತಮ್ಮನ ಮೇಲೆ ಹಲ್ಲೆ ಮಾಡುವ ಪೂರ್ವದಲ್ಲಿ ನಾವು ಹಲ್ಲೆಯನ್ನು ಮಾಡದಂತೆ ತಡೆಯಲು ಪ್ರಯತ್ನಪಟ್ಟೆವು. ಆಸ್ಪತ್ರೆಗೆ ಕರೆದುಕೊಂಡು ಬರುವಾಗ ನನ್ನ ಬಟ್ಟೆಗಾಗಲಿ ಹಾಗೂ ಮೃತನ ಹೆಂಡತಿಯವರ ಬಟ್ಟೆಗಾಗಲಿ ರಕ್ತ ಹತ್ತಿರುವುದಿಲ್ಲ. ನಾನು ಹಾಕಿಕೊಂಡ ಬಟ್ಟೆ ಮೇಲೆ ರಕ್ತ ಕಲೆ ಆಗಿತ್ತು. ಆದರೆ ಲಕ್ಷ್ಮಿ ಹಾಕಿದ ಸೀರೆ ಕಲೆಯಾಗಿದ್ದಬಗ್ಗೆ ನನಗೆ ಗೊತ್ತಿಲ್ಲ. ರಕ್ತಕಲೆಯಾದ ನನ್ನ ಬಟ್ಟೆಯನ್ನು ಪೊಲೀಸರಿಗೆ

ಕೊಟ್ಟಿರುವುದಿಲ್ಲ. ಆರೋಪಿತರು ಆಸ್ಪತ್ರೆಯಲ್ಲಿ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಹೊಟ್ಟೆ ಭಾಗಕ್ಕೆ ಚುಚ್ಚುತ್ತಾನೆ ಎನ್ನುವ ವಿಷಯವನ್ನು ನಾನುಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ನರ್ಸ್ ಮತ್ತು ವೈದ್ಯರನ್ನು ಹೊರತುಪಡಿಸಿ ಸುಮಾರು ಐದಾರು ಜನರು ಇದ್ದರು. ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ ಯಾರಾದರೂ ಫೋನ್ ಮಾಡಲು ಪ್ರಯತ್ನಪಟ್ಟಿದ್ದಾರೋ ಇಲ್ಲವೋ ನಾನು ನೋಡಿಲ್ಲ.

ಹರಿಹರದ ಮನೆಯ ಹತ್ತಿರ ಘಟನೆಯಾಗಿದೆ ಅಂತಾ ಹೇಳಿದ ಸಮಯದಲ್ಲಿ ಈ ವಿಷಯವನ್ನು ಪೊಲೀಸರಿಗೆ ತಿಳಿಸುವ ಪ್ರಯತ್ನಪಟ್ಟಿಲ್ಲ. ಕಾರಣ ನೇರವಾಗಿ ನಾವು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಘಟನೆಯಾಗಿದೆ ಅಂತಾ ಹೇಳುವ ಸಮಯದಲ್ಲಿ ನಮ್ಮನ್ನು ಹೊರತುಪಡಿಸಿ , ಬೇರೆ ಯಾರೂ ಸಾರ್ವಜನಿಕರು ಆಸ್ಪತ್ರೆಗೆ ಬರಲಿಲ್ಲ. ಆಸ್ಪತೆರಯಲ್ಲಿ ಘಟನೆಯಾಗಿದೆ ಅಂತಾ ಹೇಳಿದ ಸಮಯದಲ್ಲಿ ವೈದರು ಇದ್ದರೋ ಇಲ್ಲವೋ ನಾನು ನೋಡಿಲ್ಲ , ಆದರೆ ನರ್ಸಗಳು ಇದ್ದರು.

ಆರೋಪಿತರು ಚಾಕು ತೆಗೆದುಕೊಂಡು ನನ್ನ ತಮ್ಮನಿಗೆ ಚುಚ್ಚುತ್ತಾರೆ ಅಂತಾ ಹಾಗೂ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಹರಿಹರ ಆಸ್ಪತ್ರೆಗೆ ನಾವು ಹೋದಾಗ ಸದರಿ ಆಸ್ಪತ್ರೆಯ ವೈದರು ನನಗಾಗಲಿ ಮೃತ ನನ್ನ ತಮ್ಮನಿಗಾಗಲಿ ಚಿಕಿತ್ಸೆ ನೀಡಿಲ್ಲ. ಇಲ್ಲಿ ಆಗುವುದಿಲ್ಲ , ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹರಿಹರ ವೈದರು ನನ್ನ ಕೈಯಲ್ಲಿ ಯಾವುದೇ ದಾಖಲೆ ಕೊಟ್ಟಿಲ್ಲ.

ದಾವಣಗೆರೆ ಆಸ್ಪತ್ರೆಗೆ ಬಂದಾಗ ನಾನು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ವೈದ್ಯರು ನನ್ನನ್ನು ಎರಡು ತಾಸು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿರುತ್ತಾರೆ , ಕಾರಣ ಹೊಲಿಗೆ ಹಾಕಿರುತ್ತಾರೆ. ನನಗೆ ಆದಂತಹ ಗಾಯದ ಬಗ್ಗೆ ನಾನು ವೈದರಿಗೆ ಹೇಳಿ ಬರೆಸಿರುತ್ತೇನೆ. ಹಾಗೂ ಯಾವ ಹಿನ್ನೆಲೆಯಲ್ಲಿ ಯಾವ ಸ್ಥಳದಲ್ಲಿ ಈ ಗಾಯಗಳು ಆಗಿವೆ ಎಂದು ಹೇಳಿ ಬರೆಸಿರುತ್ತೇನೆ. ಸಾಕ್ಷಿ ಪುನಃ ಹೇಳುತ್ತಾರೆ – ನಾನು ವೈದ್ಯರಿಗೆ ಏನೂ ಹೇಳಿ ಬರೆಸಿಲ್ಲ, ಆದರೆ ವೈದ್ಯರು ನನಗೆ ಚಿಕಿತ್ಸೆ ನೀಡಿರುತ್ತಾರೆ . ದಾವಣಗೆರೆ ಆಸ್ಪತ್ರೆಗೆ ನಾನು ಮತ್ತು ಲಕ್ಷ್ಮಿಯನ್ನು ಹೊರತುಪಡಿಸಿ ಬೇರೆ ಯಾರೂ ಬಂದಿಲ್ಲ. ನನ್ನ ಪತ್ನಿಯಾಗಲಿ ಹಾಗೂ ನನ್ನ ಸಂಬಂಧಿಕರಾಗಲಿ ಯಾರು ಸಹ ಹರಿಹರ ಆಸ್ಪತ್ರೆಯಿಂದ ದಾವಣಗೆರೆ ಆಸ್ಪತ್ರೆಗೆ ಬರುವವರೆಗೆ ಬಂದಿರುವುದಿಲ್ಲ. ನಾನು ಆಸ್ಪತ್ರೆಗೆ ಹೋದಾಗಲೂ ಸಹ

ಎಚ್ಚರವಾಗಿದ್ದೆ.

ದಾವಣಗೆರೆಯ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ನನ್ನ ಮನೆಗೆ ಬರಲಿಲ್ಲ , ನನ್ನ ಅತ್ತೆ ಮನೆ ದಾವಣಗೆರೆಯಲ್ಲಿದ್ದು ,ಅಲ್ಲೇ ಉಳಿದುಕೊಂಡೆ. ನನ್ನ ಅತ್ತೆ ಮನೆಗೆ ಹೋದಾಗ ಸಮಯ ರಾತ್ರಿ 2-00 ಗಂಟೆಯಾಗಿತ್ತು.

ನಾನು ಮತ್ತು ನನ್ನ ತಮ್ಮ ಒಂದೇ ನಿವೇಶನದಲ್ಲಿ ಎರಡು ಮನೆ ಕಟ್ಟಿಕೊಂಡು ಇದ್ದೇವೆ. ಸದರಿ ಮನೆಯನ್ನು ನಾನೊಬ್ಬನೇ ಕಟ್ಟಿಸಿರುತ್ತೇನೆ ಎನ್ನುವುದು ಸುಳ್ಳು , ಆದರೆ ನಾವಿಬ್ಬರೂ ಸೇರಿ ಕಟ್ಟಿಸಿರುತ್ತೇವೆ. ನಾವು ದಾವಣಗೆರೆಗೆ ಹೋಗುತ್ತೇವೆ ಎನ್ನುವ ವಿಚಾರವನ್ನು ಲಕ್ಷ್ಮಿ ನನಗೆ ತಿಳಿಸಿರುತ್ತಾರೆ ಎನ್ನುವುದು ಸುಳ್ಳು. ಲಕ್ಷ್ಮಿ ಮತ್ತು ನಾವು ಒಳ್ಳೆ ಒಡನಾಟದಲ್ಲಿದ್ದೇವೆ.

ಘಟನೆಯಾಗಿದೆ ಅಂತಾ ಹೇಳಿದ ದಿನ ಲಕ್ಷ್ಮಿ ಇವರ ತವರು ಮನೆಯಲ್ಲಿ ನ್ಯಾಯ ಪಂಚಾಯಿತಿ ಇತ್ತು ಎನ್ನುವುದು ಸುಳ್ಳು. ದಾವಣಗೆರೆಯ ತನ್ನ ತವರು ಮನೆಯಿಂದ ಹರಿಹರಕ್ಕೆ ಬರುತ್ತಿದ್ದೇವೆ ಎಂದು ಲಕ್ಷ್ಮಿ ನನಗೆ ಮಾಹಿತಿ ನೀಡಿದ್ದರು ಎನ್ನುವುದು ಸುಳ್ಳು. ದಾವಣಗೆರೆಯಲ್ಲಿ ನಡೆದ ಪಂಚಾಯಿತಿ ವಿಚಾರಕ್ಕೆ ನಾನು ನನ್ನ ತಮ್ಮನ ಮೇಲೆ ದ್ವೇಷ ಸಾಧಿಸುತ್ತಿದ್ದೆ ಎನ್ನುವುದು ಸುಳ್ಳು. ಸಾಕ್ಷಿ ಪಂಚಾಯಿತಿ ಎಂದರೆ ಯಾವ ಪಂಚಾಯಿತಿ ಎಂದು ನನಗೆ ಅರ್ಥವಾಗುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಮತ್ತು ಲಕ್ಷ್ಮಿ ಬಗ್ಗೆ ಮೃತ ನನ್ನ ತಮ್ಮ ಅನುಮಾನಪಡುತ್ತಿದ್ದ ಎನ್ನುವುದು ಸುಳ್ಳು. ಈ ವಿಚಾರವಾಗಿ ದಾವಣಗೆರೆಯಲ್ಲಿ ನ್ಯಾಯ ಪಂಚಾಯಿತಿ ನಡೆಯುತ್ತಿತ್ತು ಎನ್ನುವುದು ಸುಳ್ಳು. ಈ ವಿಚಾರವನ್ನು ಮೃತ ಕುಮಾರ್ ಈತನು ಆರೋಪಿತರಿಗೆ ಹೇಳಿದ್ದ ಎನ್ನುವುದು ಸುಳ್ಳು. ಈ ವಿಚಾರವನ್ನು ಕೇಳಲು ಕುಮಾರ ಆರೋಪಿತರನ್ನು ಮತ್ತು ಸಂಬಂಧಿಕರಿಗೆ ಅಲ್ಲಿಗೆ ಬರಲು ಹೇಳಿದ್ದ ಎನ್ನುವುದ ಸುಳ್ಳು. ಕುಮಾರ ಮತ್ತು ಲಕ್ಷ್ಮಿ ಇವರು ಬರುತ್ತಿರುವಾಗ ನೀನೇ ಊರವರನ್ನು ಕರೆಸಿದ್ದಿಯಾ ಎಂದು ನಾನು ಆರೋಪಿತರ ಮೇಲೆ ಹಲ್ಲೆ ಮಾಡಿರುತ್ತೇನೆ ಎನ್ನುವುದು ಸುಳ್ಳು. ಇದು ನಿಮ್ಮ ವೈಯಕ್ತಿ ವಿಚಾರ , ನೀವೆ ಬಗೆಹರಿಸಿಕೊಳ್ಳಿ ಎಂದು ತಮಗೆ ಆದ ಗಾಯಕ್ಕೆ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋಗಿರುತ್ತಾರೆ ಎನ್ನುವುದು ಸುಳ್ಳು. ಆರೋಪಿತರು ಹೋದ ನಂತರ ನಾನೇ ನನ್ನ ತಮ್ಮನ ಮೇಲೆ ಹಲ್ಲೆ ಮಾಡಿರುತ್ತೇನೆ ಎನ್ನುವುದು ಸುಳ್ಳು. ಹಲ್ಲೆಯಾದ ನಂತರ ಎಲ್ಲಿ ನನ್ನ ಮೇಲೆ ಹೇಳುತ್ತಾನೆ ಎನ್ನುವ ಕಾರಣದಿಂದ , ಅದರ ನೆಪ ಒಡ್ಡಿಕೊಂಡು ಆತನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತೇವೆ ಎನ್ನುವುದು ಸುಳ್ಳು. ಆಗ ನನ್ನ ತಮ್ಮ ನನ್ನನ್ನು ಕೊಲೆ ಮಾಡುತ್ತಾರೆ, ನನ್ನನ್ನು ರಕ್ಷಿಸಿಕೊಳ್ಳಿ ಎಂದು ಆರೋಪಿತರಿಗೆ ಕೇಳಿಕೊಂಡಿರುತ್ತಾನೆ ಎನ್ನುವುದು ಸುಳ್ಳು. ಅವರ ಬಳಿ ನೀನು ಸಹಾಯಕೇಳುತ್ತೀಯಾ ಅಂತಾ ಹೇಳಿ, ನಿನ್ನನ್ನು ಯಾರು ಕಾಪಾಡುತ್ತಾರೆ ನೋಡೋಣ ಎಂದು ಹೇಳಿ, ಚಾಕು ತೆಗೆದುಕೊಂಡು ನಾನೇ ಚುಚ್ಚಿರುತ್ತೇನೆ ಎನ್ನುವುದು ಸುಳ್ಳು. ಈ ಕರಣಕ್ಕಾಗಿ ನನಗಾಗಲಿ ನನ್ನ ತಮ್ಮನಿಗಾಗಲಿ ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿಲ್ಲ ಎನ್ನುವುದು ಸುಳ್ಳು.

ದಾವಣಗೆರೆ ಆಸ್ಪತ್ರೆಯಿಂದ ನಾನು ಆರೋಪಿತರ ವಿರುದ್ಧ ದೂರು ಕೊಡುವ ಪ್ರಯತ್ನ ಮಾಡಿಲ್ಲ. ಈ ರೀತಿ ದೂರು ಕೊಡುವುದರ ಬಗ್ಗೆ ನಾನು ಲಕ್ಷ್ಮಿಗೆ ಹೇಳಿ ಹರಿಹರ ಪೊಲೀಸ್ ಠಾಣೆಯಲ್ಲಿ ದೂರು ಕೊಡಿಸಿರುತ್ತೇನೆ ಎನ್ನುವುದು ಸುಳ್ಳು. ಠಾಣೆಗೆ ಹೋಗಲು ನನಗೆ ಸಮಸ್ಯ ಇತ್ತು. ನನಗೆ ಯಾವುದೇ ಸಮಸ್ಯ ಇಲ್ಲದಿದ್ದರೂ ಸಹ ಸಮಸ್ಯ ಇತ್ತು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ಅತ್ತೆಮನೆಯಿಂದ ನಾನು ಪುನಃ ಬೆಳಿಗ್ಗೆ 11-00 ಗಂಟೆಗೆ ದಾವಣಗೆರೆಯ ಆಸ್ಪತ್ರೆಗೆ ಹೋದೆ.

ದಿ.16-05-2023 ರಂದು ಪ್ರಥಮ ಬಾರಿ ಮನೆ ಹತ್ತಿರ ಪೊಲೀಸರು ಬಂದಿದ್ದರು, ಆಗ ನಾನು ಅವರನ್ನು ಭೇಟ್ಟಿಯಾಗಿರುತ್ತೇನೆ. ಇದಕ್ಕು ಪೂರ್ವದಲ್ಲಿ ಪೊಲೀಸರು ನನ್ನನ್ನು ಭೇಟ್ಟಿಯಾಗಿರುವುದಿಲ್ಲ. ಶವಗಾರಕ್ಕೂ ಸಹ ಪೊಲೀಸರು ನನ್ನನ್ನು ಕರೆಸಿಲ್ಲ. ಶವಗಾರದ ಕೊಠಡಿಗೆ ಪೊಲೀಸರು ಬಂದಿದ್ದರು. ಪೊಲೀಸರ ಬಳಿ ಹೋಗಿ ನಾನು ಘಟನೆ ಯಬಗ್ಗೆ ಮಾತನಾಡಿಲ್ಲ. ದಿ.14-05-2023 ರಿಂದ 16-05-2023 ರ ಅವಧಿಯಲ್ಲಿ ನಾನು ಮತ್ತು ಲಕ್ಷ್ಮಿ ಇಬ್ಬರೂ ಯೋಚನೆ ಮಾಡಿ , ದೂರು , ಮಹಜರ್ ಆದ ನಂತರ 16 ನೇ ತಾರೀಖಿನ ದಿನ ನಾನು ಪೊಲೀಸರಿಗೆ ಭೇಟ್ಟಿಯಾಗಿರುತ್ತೇನೆ ಎನ್ನುವುದು ಸುಳ್ಳು. 14 ಮತ್ತು 15 ನೇ ತಾರೀಖಿನಂದು ನಡೆದ ಘಟನೆಯ ಬಗ್ಗೆ ಪೊಲೀಸರ ಮುಂದೆ ಹೇಳಲು ನನಗೆ ತೊಂದರೆ ಇತ್ತು. ನನ್ನ ಮೇಲೆ ಹಲ್ಲೆ ಮಾಡಿದ್ದರಿಂದ ರಕ್ತಸ್ರಾವವಾಗಿದ್ದು , ಮಾತನಾಡಲು ಬರುತ್ತಿಲ್ಲದ್ದರಿಂದ ನಾನು ಪೊಲೀಸರನ್ನು ಭೇಟ್ಟಿಯಾಗಲು ತೊಂದರೆ ಇತ್ತು ಎಂದು ಸಾಕ್ಷಿ ಸ್ವಇಚ್ಛೆಯಿಂದ ಹೇಳಿರುತ್ತಾರೆ. ನನಗೆ ಆದ ಗಾಯದ ಪ್ರಕಾರ ಈ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಅಂತಹ ದೊಡ್ಡ ಪ್ರಮಾಣದಲ್ಲಿ ಗಾಯವಾಗಿಲ್ಲ ಎನ್ನುವುದು ಸುಳ್ಳು.

ಆರೋಪಿತರು ಕುಮಾರ್ ಈತನನ್ನು ಕೊಲೆ ಮಾಡುವ ಉದ್ದೇಶ ಇದ್ದಿದ್ದರೆ ಪ್ರಶಾಂತ್ ನಗರದಲ್ಲಿ ಕೊಲೆ ಮಾಡುತ್ತಿದ್ದರು, ಆಸ್ಪತ್ರೆಗೆ ಹೋಗುವ ಅವಶ್ಯಕತೆ ಇರುತ್ತಿರಲಿಲ್ಲ , ಆ ರೀತಿ ಉದ್ದೇಶ ಅವರು ಹೊಂದಿರುವುದಿಲ್ಲ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ – ಅವರು ಯಾವ ಉದ್ದೇಶ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಕೊಲೆ ಮಾಡುವ ಉದ್ದೇಶ ಹೊಂದಿರಲಿಲ್ಲ ಎನ್ನುವುದು ಸುಳ್ಳು.

ಆರೋಪಿತರು  ಕುಮಾರನು ಹೇಳಿದ ಪ್ರಕಾರ ಪ್ರಶಾಂತ್ ನಗರಕ್ಕೆ ಬಂದಿದ್ದು , ಆಗ ನಾನು ಮತ್ತು ಲಕ್ಷ್ಮಿ ಇಬ್ಬರೂ ಸೇರಿ ಆರೋಪಿತರೇ ಕುಮಾರನನ್ನು ಕೊಲೆ ಮಾಡಿರುತಾರೆ ಎಂದು ಸುಳ್ಳು ಕಟ್ಟು ಕಥೆ ಕಟ್ಟಿ ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಎನ್ನುವುದು ಸರಿಯಲ್ಲ. ಆರೋಪಿತರು ಕುಮಾರ್ ಈತನಿಗೆ ಪ್ರಶಾಂತ್ ನಗರದಲ್ಲಿ ಹಲ್ಲೆ ಮಾಡಿಲ್ಲ, ಆಸ್ಪತ್ರೆಯಲ್ಲೂ ಸಹ ಹಲ್ಲೆ ಮಾಡಿಲ್ಲ, ನಾನೇ ಕೊಲೆ ಮಾಡಿರುತ್ತೇನೆ ಎನ್ನುವುದು ಸುಳ್ಳು. ಆಸ್ತಿ ವಿಚಾರವಾಗಿ ಯಾವುದೇ ದ್ವೇಷ ಇರಲಿಲ್ಲ ಎನ್ನುವುದು ನಿಜ.

ನಾನು ಪೊಲೀಸರ ಮುಂದೆ ಹೇಳಿಕೆ ಕೊಡುವಾಗ – ನಂತರ ರಾತ್ರಿ 10–15 ಗಂಟೆಗೆ ನಮ್ಮ ಮನೆಯಕ್ರಾಸ್ ಹತ್ತಿರ, ಬಾತಿ ಶುಗರ್ ಫ್ಯಾಕ್ಟರಿಗೆ ಹೋಗುವ ರಸ್ತೆಯಲ್ಲಿ ಗಲಾಟೆಯಾಗುತ್ತಿತ್ತು, ಆಗ ನಾನು ಹೋದೆನು, ಆಗ ರಾಜು ಮತ್ತು ಮಾರುತಿ ಇಬ್ಬರೂ, ಮಾರುತಿ ಇವನಿಗೆ ಸೇರಿದ ಕೆಎ–14–ಹೆಚ್ ಎಲ್–0452 ಹಿರೋ ಸ್ಪೆಂಡರ್ ಬೈಕನಲ್ಲಿ ಬಂದವರು – ಎಂದು ನಾನು ನಿ.ಡಿ. 1 ರಂತೆ ಹೇಳಿಕೆ ನೀಡಿಲ್ಲ.

ಮು.ಮಾ.3 ಚಾಕು ಹಿಡಿಯನ್ನು ಹೊರತುಪಡಿಸಿ ಮುಂಭಾಗ ಎರಡರಿಂದ ಎರಡುವರೆ ಇಂಚು ಇರಬಹುದು. ಸದರಿ ಚಾಕುವಿನ ಮುಂಭಾಗ ಕಟ್ ಆಗಿದೆ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇರೀತಿಯ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ಮು.ಮಾ.3 ಚಾಕುವಿಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ–ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-3

ದಿ.30-07-2024 ರಂದು ಆರೊಪಿಪರ ವಕೀಲರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಯ ಮುಂದುವರೆದ ಪಾಟೀಸಾಲು ಮಾಡಲು ನ್ಯಾಯಾಲಯವು ಆರೋಪಿಪರ ವಕೀಲರಿಗೆ ಅನುಮತಿ ನೀಡಲಾಯಿತು.

ದಿ.07-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀಸವಾಲುಃ-</u> ಆರೊಪಿತರ ಪರ ಶ್ರೀ ಪಿ.ಬಿ ವಕೀಲರಿಂದ .

ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಒಂದಕ್ಕೊಂದು ಹೊಂದಿಕೊಂಡ ಎರಡು ದ್ವಾರಗಳು ಇವೆ ಎನ್ನುವುದು ನಿಜ. ಒಂದು ಹೊರರೋಗಿ ಚಿಕಿತ್ಸೆಗಾಗಿ ಹೋಗಲು ಉಪಯೋಗಿಸುವ ದ್ವಾರ ಇರುತ್ತದೆ. ಇನ್ನೊಂದು ತುರ್ತು ಚಿಕಿತ್ಸೆಗೆ ಹೋಗಲು ದ್ವಾರ ಇರುತ್ತದೆ. ಎರಡೂ ದ್ವಾರಗಳಿಗೂ ಎರಡೂಕಡೆ ಸಿಸಿ ಟಿವಿ ಕ್ಯಾಮರಾ ಅಳವಡಿಸಿರುತ್ತಾರೆ. ಸಿಸಿ ಟಿ ವಿ ಕ್ಯಾಮರಾ ಅಳವಡಿಸಿರುವುದರಿಂದ ಯಾವ ವಾಹನ ಒಳಗೆ ಹೋಗುತ್ತವೆ ಮತ್ತು ಹೊರಗೆ ಹೋಗುತ್ತವೆ ಎಂಬುದು ಅವುಗಳಲ್ಲಿ ಗೊತ್ತಾಗುತ್ತದೆ. ಆಸ್ಪತ್ರೆಯ ಮುಖ್ಯ ದ್ವಾರದಲ್ಲಿ ಹೋಗುವುದು ಸಹ ಗೊತ್ತಾಗುತ್ತದೆ. ತುರ್ತು ಚಿಕಿತ್ಸೆಗೆ ಒಳಗೆ ಹೋಗುವ ಪೂರ್ದಲ್ಲಿ ಬಾಗಿಲಲ್ಲಿ ಸಿಸಿ ಟಿ ವಿ ಕ್ಯಾಮರಾ ಅಳವಡಿಸಲಾಗಿದೆ. ಸದರಿ ಕ್ಯಾಮರಾದಲ್ಲಿ ಆಸ್ಪತ್ರೆಯ ಆವರಣ ಸಂಪೂರ್ಣ ಕವರ್ ಆಗುತ್ತದೆ ಎನ್ನುವುದು ನಿಜ. ಒಳಗಡೆ ಹೋಗುತ್ತಿದ್ದಹಾಗೆ ಎಡಭಾಗದಲ್ಲಿ ನರ್ಸ್ ರವರ ಕೊಠಡಿ ಇದೆ. ಬಲಭಾಗಕ್ಕೆ ವೈದ್ಯರ ಕೊಠಡಿ ಇದೆ. ನರ್ಸ್ ರವರ ಕೊಠಡಿ ಪಕ್ಕದಲ್ಲಿ ಒಂದು ರೂಮ್ ಇದ್ದು , ಆ ರೂಮಿಲ್ಲಿ ಯಾವತ್ತು ನರ್ಸ್ ರವರು ಇರುತ್ತಾರೆ. ಸದರಿ ಕೊಠಡಿ ನಾಲ್ಕು ಅಡಿ ಎಷ್ಟು ಕಟ್ಟಡ ಇದ್ದು , ನಂತರ (ಒಪನ್ ಇದೆ. ಸದರಿ ರೂಮಿಲ್ಲಿ 24 ಗಂಟೆ ನರ್ಸ್ ರವರು ತಮ್ಮ ಪೀಠೋಪಕರಣ ಇಟ್ಟುಕೊಂಡು ಅಲ್ಲೇ ಕುಳಿತಿರುತ್ತಾರೆ. ಸದರಿ ಕೆಕೂಠಡಿಯ ಮುಂದೆ ಕಾರಿಡಾರ್, ರೋಗಿಗಳು ಕುಳಿತುಕೊಳ್ಳಲು ಒಂದು ಕೊಠಡಿ ಇದೆ. ಕಾರಿಡಾರ್ ಪಕ್ಕದಲ್ಲಿ ತುರ್ತು ಚಿಕಿತ್ಸೆಗೆ ಸಂಬಂಧಪಟ್ಟ ವೈದ್ಯರಿಗೆ ಒಂದು ವಾರ್ಡ್ ಇದೆ. ಸದರಿ ಕಾರಿಡಾರ್ ನಿಂದ ಒಂದು ಕಡೆ ಓಪಿಡಿಗೆ , ಇನ್ನೊಂದು ಕಡೆ ವಾರ್ಡ್ ಗೆ ಹೋಗಲು ಬರುತ್ತದೆ. ನರ್ಸ್ ರವರು ಕುಳಿತುಕೊಳ್ಳುವ ಕೊಠಡಿಯಲ್ಲಿ ಒಂದು ಸಿಸಿ ಟಿ ವಿ ಕ್ಯಾಮರಾ ಅಳವಡಿಸಲಾಗಿದೆ, ಅದರಿಂದ ಓಪಿಡಿಗೆ ಹೋಗಿ ಬರುವವರ ಬಗ್ಗೆ ಮತ್ತು ಚಿಕಿತ್ಸೆಗೆ ಬರುವವರ ಬಗ್ಗೆ ಗೊತ್ತಾಗುತ್ತದೆ. ಕಾರಿಡಾರ್ ಪಕ್ಕದಲ್ಲಿ ಎಮರ್ಜನ್ಸಿ ವಾರ್ಡ್ ಇದ್ದು , ಅಲ್ಲಿ ವೈದ್ಯರು ಚಿಕಿತ್ಸೆ

ನೀಡುವುದಿಲ್ಲ , ಆದರೆ ರೋಗಿಗಳು ಪ್ರಿಸ್ಕ್ರಿಪ್ ಶನ್ ಪಡೆದುಕೊಂಡು ಬಂದು, ಅದನ್ನು ತೋರಿಸಿದ ನಂತರ ಆ ಸ್ಥಳದಲ್ಲಿ ವೈದರು ರೋಗಿಗೆ ಯಾ ಚಿಕಿತ್ಸೆ , ಎಲ್ಲಿ ಹೋಗಬೇಕು ಎಂದು ಮಾಹಿತಿ ನೀಡುತ್ತಾರೆ. ವೈದ್ಯರು ಕುಳಿತುಕೊಳ್ಳುವ ಎದುರು ರೋಗಿಗಳು ಕುಳಿತುಕೊಳ್ಳಲು ಬೆಂಚ್ ಹಾಕಲಾಗಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಹಗಲಲ್ಲಿ ಸಾಕಷ್ಟು ರೋಗಿಗಳು ಇದ್ದು , ಸಾಯಂಕಾಲ ಮತ್ತು ರಾತ್ರಿ ಕಡಿಮೆ ಇರುತ್ತಾರೆ. ಸದರಿ ಆಸ್ಪತ್ರೆ ರಾತ್ರಿ ಸಹ ರೋಗಿಗಳ ಜನದಟ್ಟಣೆ ಇದ್ದರೂ ಸಹ ಇರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. ಆಸ್ಪತ್ರೆಯಲ್ಲಿ ನರ್ಸ್‌ರವರು ಕುಳಿತುಕೊಳ್ಳುವ ರೂವಿನ ಮೇಲೆ ಅಳವಡಿಸಿದ ಸಿಸಿ ಕ್ಯಾಮರಾ, ಆಸ್ಪತ್ರೆಯ ಒಳಭಾಗದಲ್ಲಿ ಅಳವಡಿಸಿದ ಸಿಸಿ ಕ್ಯಾಮರಾ , ಸದರಿ ಸಿಸಿ ಕ್ಯಾಮರಾದಲ್ಲಿ ವೈದರು ಕುಳಿತುಕೊಳ್ಳುವ ಜಾಗ ಮತ್ತು ರೋಗಿಗಳು ಕುಳಿತುಕೊಳ್ಳುವ ಜಾಗ ಸಂಪೂರ್ಣ ಸಿಸಿ ಟಿವಿ ಕ್ಯಾಮರಾದಿಂದ ಗೊತ್ತಾಗುತ್ತದೆ.

ಸರ್ಕಾರಿ ಆಸ್ಪತ್ರೆಯ ಕಂಪೌಂಡ್ ಅಲ್ಲಲ್ಲಿ ಒಡೆದಿದೆ ಎಂಬುದು ನನಗೆ ಗೊತ್ತಿಲ್ಲ. ಪಕ್ಕದಲ್ಲಿ ಪಾರ್ಕ್ ಇರುವುದರಿಂದ ಬೀದಿನಾಯಿಗಳು ಆಸ್ಪತ್ರೆಯ ಒಳಗೆ ಬರುತ್ತವೆ ಎಂಬುದು ನನಗೆ ಗೊತ್ತಿಲ್ಲ. ಆಸ್ಪತ್ರೆಯ ಹತ್ತಿರ ನಾಯಗಳು ಓಡಾಡುತ್ತವೆ ಎನ್ನುವುದನ್ನು ನಾನು ನೋಡಿಲ್ಲ. ಕಾರಣ ನಾನು ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ಘಟನೆಯಾಗಿದೆ ಅಂತಾ ಹೇಳುವ ದಿನ ಆಸ್ಪತ್ರೆಯ ಕರ್ತವ್ಯದಲ್ಲಿ ನಾನು ಇದ್ದೆ ಆ ದಿನ ಪೊಲೀಸರು ಆಸ್ಪತ್ರೆಗೆ ಬಂದಿದ್ದರು , ಆದರೆ ಸಮಯ ಗೊತ್ತಿಲ್ಲ. ನಾನು ಮೋಟರ್ ಆನ್ ಮಾಡಿದ ಎಷ್ಟು ಹೋತ್ತಿನ ನಂತರ ಪೊಲೀಸರು ಆಸ್ಪತ್ರೆಗೆ ಬಂದಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ಬಂದಾಗ ಅಲ್ಲಿರತಕ್ಕಂತಹ ಚಪ್ಪಲಿಗಳನ್ನು ಕೊಡುವ ಪ್ರಯತ್ನ ಮಾಡಿಲ್ಲ.

ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವಾಗ ನಾನು ಆಸ್ಪತ್ರೆಯನ್ನು ಸ್ವಚ್ಛ ಮಾಡುವಾಗ ಅಲ್ಲಿ ಒಂದು ಜೊತೆ ಚಪ್ಪಲ್ಲಿ ಆ ಕಡೆ ಒಂದು ಈ ಕಡೆ ಒಂದು ಬಿದ್ದಿತ್ತು. ಅನ್ನುಕೋಲು ತೆಗೆದುಕೊಂಡು ನಮ್ಮ ಆಸ್ಪತ್ರೆಯ ಹೊರಡೆ ದಬ್ಬಿದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ. ನಮ್ಮ ಆಸ್ಪತ್ರೆಯ ಹೊರಗಡೆ ಚಪ್ಪಲಿ ಬಿಡಲು ಸ್ಟ್ಯಾಂಡ್ ಇರುವುದಿಲ್ಲ ಎನ್ನುವುದು ಸುಳ್ಳು. ಆಸ್ಪತ್ರೆಯ ಮುಖ್ಯ ದ್ವಾರದ ಹೊರಭಾಗದಲ್ಲಿ ಚಪ್ಪಲಿ ಸ್ಟ್ಯಾಂಡ್ ಇರುವುದಿಲ್ಲ , ಆದರೆ ಒಳಭಾಗದಲ್ಲಿದೆ. ಎಂಟ್ರೆಂಸ್ ಗೇಟ್ ಪಕ್ಕಕ್ಕೆ ನಾನು ಚಪ್ಪಲಿಯನ್ನು

ದಬ್ಬಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸ್ವಚ್ಛ ಮಾಡುವಾಗ ಮೃತನ ಚಪ್ಪಲಿ ಒಳಗಡೆ ಇತ್ತು, ಒಂದು ಹೊರಗಡೆ ಇತ್ತು, ಎರಡೂ ಚಪ್ಪಲಿಗಳನ್ನು ಒಂದು ಕಡೆ ಇಟ್ಟಿರುತ್ತೇನೆ ಎಂದು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಹೊರ ರೋಗಿಗಳಿಗೆ ಸಂಬಂಧಿಸಿದ ಗಲಾಟೆ ಹೊರಗಡೆಯಾಗಿದ್ದು, ಅವರು ಆಸ್ಪತ್ರೆಗ ಬಂದಿದ್ದರು, ಅವರ ಹೆಸರು ಕುಮಾರ್ ಅಂತಾ ಗೊತ್ತಾಯಿತು ಎಂಬ ಈ ವಿಷಯವನ್ನು ನಾನು ಫಿರ್ಯಾದಿ ಮತ್ತು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ಪೊಲೀಸರು ಮಹಜರ್ ಗೆ ಬರಲು ನೋಟೀಸು ಕೊಟ್ಟಿರಲಿಲ್ಲ. ಆದರೆ ನಾನು ಆಸ್ಪತ್ರೆಯಲ್ಲ ಕರ್ತವ್ಯ ಮಾಡುತ್ತಿದ್ದಾಗ ಪೊಲೀಸರೇ ನನ್ನ ಬಳಿ ಬಂದರು.

ನಿಪಿ.6 ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ಫೋಟೋದಲ್ಲಿ ಚಪ್ಪಲಿ ಸ್ಟ್ಯಾಂಡ್ ಕಾಣುತ್ತಿಲ್ಲ. ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಬಾಕ್ಸ ಚಪ್ಪಲಿ ತರುವಾಗ ಅಂಗಡಿಯವರು ಕೊಡುವ ಬಾಕ್ಸ್ ಆಗಿರುತ್ತದೆ ಎನ್ನುವುದು ಸುಳ್ಳು, ಆದರೆ ನಮ್ಮ ಆಸ್ಪತ್ರೆಗೆ ಔಷಧಿಯನ್ನು ತರುವಾಗ ಕೊಡುವ ಬಾಕ್ಸ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಸದರಿ ಫೋಟೋದಲ್ಲಿ ಎರಡೂ ಚಪ್ಪಲಿಗಳು ಒಂದು ಬಾಕ್ಸಿನಲ್ಲಿರುತ್ತವೆ ಎನ್ನುವುದು ನಿಜ.

ಪ್ರತಿ ನಾಲ್ಕರಿಂದ ಐದು ತಾಸಿಗೆ ನಮ್ಮ ಆಸ್ಪತ್ರೆಯ ಒಳಗಡೆ ಕಸ ಗುಡಿಸುತ್ತಾರೆ ಎನ್ನುವುದು ಸುಳ್ಳು. ನಮ್ಮ ಆಸ್ಪತ್ರೆಯ ಸಿಬ್ಬಂದಿಗಳು ಆಸ್ಪತ್ರೆಯ ಆವರಣವನ್ನು ಬೆಳಿಗ್ಗೆ ಕಸ ಗುಡಿಸಿ ಸ್ವಚ್ಛಗೊಳಿಸುತ್ತಾರೆ ಎನ್ನುವುದು ನಿಜ.

ಪೊಲೀಸರು ನನ್ನ ಬಳಿ ಬಂದಿಲ್ಲ, ನಾನು ಚಪ್ಪಲಿ ಹಾಜರುಪಡಿಸಿಲ್ಲದಿದ್ದರೂ ಸಹ ಹಾಜರುಪಡಿಸಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಕೇಸಿಗಾಗಿ ಹೊರಗಡೆಯಿಂದ ಹೊಸ ಚಪ್ಪಲಿ ತಂದು ಪೊಲೀಸರಿಗೆ ಹಾಜರುಪಡಿಸಿರುತ್ತೇನೆ ಎನ್ನುವುದು ಸುಳ್ಳು. ಸಾಕ್ಷಿ ಮುಂದುವರೆದು – ಅವನವೇ ಎಂದು ಉತ್ತರಿಸಿರುತ್ತಾರೆ. ಸದರಿ ಚಪ್ಪಲಿಗಳನ್ನು ಅವನೇ ಹಾಕಿಕೊಂಡು ಬಂದಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ.

ಆಸ್ಪತ್ರೆಗೆ ಪ್ರತಿದಿನ ಸಾವಿರವರು ಜನರು ಬರುತ್ತಾರೆ. ಯಾರು ಯಾರು ಯಾವ ಕಲರ್ ನ ಚಪ್ಪಲಿ ಹಾಕಿಕೊಂಡು ಬಂದಿರುತ್ತಾರೆ ಎಂದು ನಾನು ನೋಡಿರುವುದಿಲ. ಸದರಿ ಫೋಟೋದಲ್ಲಿರುವ ಚಪ್ಪಲಿಗಳು ಅವನವೇ ಇರುತ್ತವೆ ಎಂದು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಚಪ್ಪಲಿಗಳು ಅವನವಾಗಿಲ್ಲದಿದ್ದರೂ ಸಹ ಹೊರಗಿನಿಂದ ತಂದು ಹಾಜರುಪಡಿಸಿದ್ದು ಅವನವೇ ಇರುತ್ತವೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಿಪಿ.3 ಬೆರಳಚ್ಚನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ಚಪ್ಪಲಿ ಹಾಜರುಪಡಿಸುವ ಪೂರ್ವದಲ್ಲಿ ನಿಪಿ.3 ರಲ್ಲಿರುವ ವಿಷಯ ಬೆರಳಚ್ಚು ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದ್ದರಿಂದ ನಿಪಿ.3 ರಲ್ಲಿ ಏನು ಬೆರಳಚ್ಚು ಮಾಡಿದ್ದಾರೆ ಎಂಬ ಮಾಹಿತಿ ನನಗೆ ಇಲ್ಲ. ಆದರೆ ಚಪ್ಪಲಿ ಕೊಟ್ಟ ಬಗ್ಗೆ ಬರೆದಿದ್ದಾರೆ. ಆ ರೀತಿ ಬರೆಯದೇಯಿದ್ದರೂ ಸಹ ಬರೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ.6 ಫೋಟೋದಲ್ಲಿ ಲ್ಯಾಪ್ ಟಾಪ್ ಇದ್ದು, ಆ ರೀತಿ ಲ್ಯಾಪ್ ಟಾಪ್ ಹಿಡಿದು ಬೆರಳಚ್ಚು ಮಾಡಲು ಆಗುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ . ಈ ಕೇಸಿಗಾಗಿ ನಿಪಿ.6 ಫೋಟೋವನ್ನು ಪೊಲೀಸರು ಸೃಷ್ಟಿಸಿರುತ್ತಾರೆ ಎನ್ನುವುದು ಸುಳ್ಳು. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಚಪ್ಪಲಿ ಹಾಜರುಪಡಿಸಿದೆ , ಮಹಜರ್ ಮಾಡಿದರು , ಫೋಟೋ ತೆಗೆದರು ಎಂದು ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.